# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/329/2017/ಎಆರ್‌ಇ-13

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 15/06/2022.

## ವಿಚಾರಣಾ ವರದಿ

**ಉಪಸ್ಥಿತರು:** **ಶೋಭಾ ಎಸ್,**
ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:-** ಶ್ರೀ. ಶಿವಕುಮಾರ್ ಬಿ ಮೇತ್ರೆ, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೋಸಂ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ರವರ ವಿರುದ್ಧ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:-** 1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/2852/2013 ಎ.ಆರ್.ಇ-5, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ : 05/11/2016.

2. ಸರ್ಕಾರದ ಆದೇಶ ಸಂಖ್ಯೆ: ಇಡಿ 650 ಎಸ್‌ಇಎಸ್ 2016, ಬೆಂಗಳೂರು, ದಿನಾಂಕ : 30/01/2017.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/329/2017, ಬೆಂಗಳೂರು, ದಿನಾಂಕ: 02/03/2017.

* * * *

1. ದೂರುದಾರರಾದ ಶ್ರೀ. ಜಯಪ್ರಕಾಶ್ ನಾರಾಯಣ ಕಾಂಬ್ಳೆ ಕೇರ್/ಆಫ್ ಸೋನಾ ಬಿ. ನಿಲಯ, ಹೆಚ್.ನಂ.15-3-155, ಬ್ಯಾಂಕ್ ಕಾಲೋನಿ, ಕುಂಬಾರವಾಡ, ಬೀದರ್ ಜಿಲ್ಲೆ ರವರು

ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಶಿವಕುಮಾರ್ ಬಿ ಮೇತ್ರೆ, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೋಸಂ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ರವರ ವಿರುದ್ಧ ದೂರನ್ನು ಸಲ್ಲಿಸಿ, ಸದರಿ ದೂರಿನಲ್ಲಿ ಆ.ಸ.ನೌ ರವರು ಸರ್ಕಾರಿ ಪ್ರೌಢಶಾಲೆ, ಕೋಸಂ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆಯಲ್ಲಿ ಶಾಲೆಯ 5 ಕೊಠಡಿಗಳನ್ನು ನಿರ್ಮಾಣ ಮಾಡಲು ಸರ್ಕಾರದಿಂದ ರೂ.31,51,000/- ಗಳು ಮಂಜೂರಾಗಿದ್ದು, ಸದರಿ ಶಾಲಾ ಕೊಠಡಿ ನಿರ್ಮಾಣಕ್ಕೆ ಟೆಂಡರ್ ಕರೆಯದಿರುವುದು ಮತ್ತು ನಿರ್ಮಾಣವು ಕ್ರಮಬದ್ಧವಾಗಿಲ್ಲದೆ, ಕಳಪೆಯಾಗಿರುವುದು ಕಂಡು ಬರುತ್ತದೆ ಎಂದು ದೂರನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1) ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿದಂತೆ, ದಿನಾಂಕ: 30/01/2017 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 02/03/2017 ರಂದು ಅಪರ ನಿಬಂಧಕರು (ವಿಚಾರಣೆಗಳು-1) ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು (ವಿಚಾರಣೆಗಳು-1) ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 10/03/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

4. ಅಧಿಕೃತ ಜ್ಞಾಪನ ಸಂಖ್ಯೆ: ಉಪಲೋಕ್-1 & 2/ಡಿಇ/ವರ್ಗಾವಣೆ/2018, ದಿನಾಂಕ:06/07/2017 ರ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಆದೇಶದಂತೆ ಸದರಿ ಇಲಾಖಾ ವಿಚಾರಣೆಯನ್ನು ಅಪರ ನಿಬಂಧಕರು (ವಿಚಾರಣೆಗಳು-1) ರವರಿಂದ ಅಪರ ನಿಬಂಧಕರು (ವಿಚಾರಣೆಗಳು-7) ಶಾಖೆಗೆ ವರ್ಗಾವಣೆಗೊಂಡಿರುತ್ತದೆ.

5. ಅಧಿಕೃತ ಜ್ಞಾಪನ ಸಂಖ್ಯೆ: ಉಪಲೋಕ್-1 & 2/ಡಿಇ/ವರ್ಗಾವಣೆ/2018, ದಿನಾಂಕ:06/08/2018 ರ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಆದೇಶದಂತೆ ಸದರಿ ಇಲಾಖಾ ವಿಚಾರಣೆಯನ್ನು ಅಪರ ನಿಬಂಧಕರು (ವಿಚಾರಣೆಗಳು-7) ರವರಿಂದ ಅಪರ ನಿಬಂಧಕರು (ವಿಚಾರಣೆಗಳು-13) ಶಾಖೆಗೆ ವರ್ಗಾವಣೆಗೊಂಡಿರುತ್ತದೆ.

## ANNEXURE-1
## CHARGE

6. While you DGO Sri. Shivakumar B Methre working as Head Master in Government High School, Kosam, Bhalki Taluk, Bidar District, construction of five rooms in Government High School, Bhalki District was taken up and you have withdrawn Rs.31,50,000/- sanctioned for the said purpose from the joint account and on investigation through District Engineer, it is found that small slab pieces were used for flooring and the construction of the building was of substandard and therefore you DGO has failed to

maintain absolute integrity and devotion to duty and committed an act which is unbecoming of a Government Servant and therefore you are guilty of misconduct under Rule 3(1)(i) to (iii) of KCS (Conduct) Rules, 1966. Hence, this charge.

## ANNEXURE-II

## STATEMENT OF IMPUTATION OF MISCONDUCT

7. **Brief facts of the case are**:- On the basis of complaint filed by Sri. Jaya Praksh Narayana Kambale C/o. Sona B. Nilaya, H.No.15-3-155 , Bank Colony, Kumbarawada, Bidar District (hereinafter referred to as 'complainant' for short) against Sri. Shivakumar B Methre, Head Master, Government High School, Bhalki, Bidar District (herein after referred to as Respondent) alleging misconduct, an investigation was taken up after invoking section 9 of Karnataka Lokayukta Act, 1984. Respondent has not formed SDMC and he has withdrawn Rs.31.50 lakhs from the joint account which has been granted for construction of 5 rooms for the school and 5 rooms constructed are of

substandard and the rooms have been constructed without calling for tender.

8. Respondent has submitted comments dated: 16/01/2014 stating that the M.L.A is the President of SDMC and M.L.A has not formed SDMC. That he started construction of the rooms on the direction of DDPI and work has been completed during December 2013.

9. Report was called for from D.D.P.I on the complaint. D.D.P.I has submitted letter stating that he has obtained report from District Engineer, Sarva Shikshana Abhiyana. He has submitted the report of District Engineer, Sarva Shikshana Abhiyana. The report of District Engineer is that the work has been completed and water has been stagnated over the roof slab and only small pieces of slabs were used for flooring.

10. The report of District Engineer show that water has been stagnated over the roof slab and only small pieces of slabs were used for flooring. This shows that the construction work of school rooms is of substandard. Respondent has not denied in his comments that tender

was not called for in the construction of school rooms. In view of the above, comments submitted by the Respondent is not acceptable to drop the proceedings against the Respondent.

11. Since the said facts and materials on record prima facie show that Respondent Sri. Shivakumar B Methre, Head Master, Government High School, Bhalki, Bidar District has committed misconduct under Rule 3(1) of KCS (Conduct) Rules, 1966 recommendation is made under section 12(3) of Karnataka Lokayukta Act, 1984 to the Competent Authority to initiate disciplinary proceedings against Respondent Sri. Shivakumar B Methre, Head Master, Government High School, Bhalki, Bidar District and to entrust the inquiry to this Authority under Rule 14-A of Karnataka Civil Service (Classifications, Control and Appeal) Rules, 1957.

12. Since said facts and material on record prima facie show that, the respondents/DGO Sri. Shivakumar B Methre has committed grave misconduct, now, acting under Section 12(3) of Karnataka Lokayukta Act, recommendation is made to the Competent Authority to

initiate disciplinary proceedings against the respondents for misconduct under Rule 3(1)(i) to (iii) of KCS (Conduct) rules 1966 the Government after consideration of materials, has entrusted enquiry to Hon'ble Upalokayukta. Hence, the charge.

13. ಈ ಮೇಲ್ಕಂಡ ದೋಷಾರೋಪಣೆ (Article of charge) ಅನ್ನು ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ : 25/04/2017 ರಂದು ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಹೇಳಿಕೆಯನ್ನು ಪಡೆಯಲಾಯಿತು. ಆ.ಸ.ನೌ ರವರು ದಿನಾಂಕ : 03/03/2018 ರಂದು ತಮ್ಮ ಪರವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಅದರಲ್ಲಿ ದೋಷಾರೋಪಣೆಯಲ್ಲಿ ಮಾಡಿದ ಆಪಾದನೆಯ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. ಆ.ಸ.ನೌ ರವರು ಮುಂದುವರೆದು ಸರಕಾರಿ ಪ್ರೌಢಶಾಲೆ, ಕೋಸಂ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆಯಲ್ಲಿ 2012-13ನೇ ಸಾಲಿನಲ್ಲಿ ದಿನಾಂಕ : 30/06/2012 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ನಾನು ಬಂದಿನಂದಿನಿಂದ ಇಲ್ಲಿಯವರೆಗೆ ಶಾಲೆಯ ಶಿಕ್ಷಕರೊಂದಿಗೆ ಹಾಗೂ ಕೋಸಂ ಗ್ರಾಮದ ಸಮಸ್ತ ನಾಗರೀಕರೊಡನೆ ಒಳ್ಳೆಯ ರೀತಿಯಿಂದ ನಡೆದು ಕೊಂಡಿರುತ್ತೇನೆ. ನಾನು ಶಾಲೆಗೆ ಬಂದ ಮೇಲೆ ಎಸ್.ಎಸ್.ಎಲ್.ಸಿ ಫಲಿತಾಂಶ 2013 ರಲ್ಲಿ 97% ಬಂದಿರುತ್ತದೆ. ಮಾನ್ಯ ಶಾಸಕರು, ಭಾಲ್ಕಿ ಕ್ಷೇತ್ರ ರವರು ಎಲ್ಲಾ ಪ್ರೌಢಶಾಲೆಗಳ ಅಧ್ಯಕ್ಷರು ಆಗಿರುತ್ತಾರೆ. ಆದ್ದರಿಂದ 8, 9ನೇ ತರಗತಿ ಮಕ್ಕಳ ಪಾಲಕರ ಪಟ್ಟಿ ಶಾಸಕರಿಗೆ ಸಲ್ಲಿಸಿದ್ದೇನೆ. ಶಾಸಕರು ಎಸ್.ಡಿ.ಎಂ.ಸಿ ರಚನೆ ಮಾಡಿರುವುದಿಲ್ಲ. ಭಾಲ್ಕಿ ಕ್ಷೇತ್ರದ ಶಾಸಕರು ಎಸ್.ಡಿ.ಎಂ.ಸಿ ಅಧ್ಯಕ್ಷರಾಗಿರುವುದರಿಂದ ಅವರ ನಿರ್ದೇಶನದಂತೆ ನಡೆಯಬೇಕಾಗಿರುತ್ತದೆ. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್ ಜಿಲ್ಲೆ ಅವರ ಅನುಮತಿ ಪಡೆದು ಶಾಲೆಯ ಕಟ್ಟಡ ಕಾಮಗಾರಿ ಪ್ರಾರಂಭ

ಮಾಡಿದ್ದೇವೆ. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್ ಜಿಲ್ಲೆ ರವರ ಆದೇಶದಂತೆ ಸದರಿ ಕಾಮಗಾರಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷದ 2012-13 ನೇ ಸಾಲಿನ ಡಿಸೆಂಬರ್ 2013 ಅಂತ್ಯದೊಳಗೆ ಮುಕ್ತಾಯಗೊಳಿಸಿ ದ್ವಿಪ್ರತಿಯಲ್ಲಿ ಫೋಟೋಗಳನ್ನು ದೃಢೀಕರಿಸಿ ಉಪಯೋಗತಾ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ಈ ಕಛೇರಿಗೆ ತಪ್ಪದೆ ಸಲ್ಲಿಸುವುದು ಅಂದ ಪ್ರಯುಕ್ತ ಕಾಮಗಾರಿ ಡಿಸೆಂಬರ್ ಅಂತ್ಯದೊಳಗೆ ಪೂರ್ಣ ಮಾಡಲಾಗಿದೆ. ಕೊಠಡಿ ನಿರ್ಮಾಣ ಕಾರ್ಯ ಇಲಾಖಾ ನಿಯಮದಂತೆ ಶ್ರೀ. ರಾಜಕುಮಾರ್ ವೈಜ್ಯನಾಥ ನಾಯಿಕೊಡೆ, ಚಂದಾಪುರ, ಗುತ್ತೇದಾರ ಇವರು ಮಾನ್ಯ ಶಾಸಕರು, ಎಸ್.ಡಿ.ಎಂ.ಸಿ, ಅಧ್ಯಕ್ಷರು ರವರ ಅನುಮತಿ ಮೇರೆಗೆ ಹಾಗೂ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಅನುಮತಿ ಮೇರೆಗೆ 05 ಕೊಠಡಿಗಳು ಕಾಮಗಾರಿ ಪೂರ್ಣ ಮಾಡಿರುತ್ತೇನೆ. ಕೊಠಡಿ ನಿರ್ಮಾಣ ಕಾರ್ಯ ಇಲಾಖಾ ನಿಯಮದಂತೆ ಮಾಡಲಾಗಿ. ನಾನು ಮಾನ್ಯ ಶಾಸಕರು, ಎಸ್.ಡಿ.ಎಂ.ಸಿ ಅಧ್ಯಕ್ಷರು ಇವರ ಹತ್ತಿರ ಲಂಚ ಪಡೆದಿಲ್ಲ. ನಾನು ಸ್ವತ: ರವಿವಾರ ಹಾಗೂ ರಜಾ ದಿನಗಳಲ್ಲಿಯೂ ಕೂಡಾ ಶಾಲೆಯ ಕಟ್ಟಡ ಕಾಮಗಾರಿಯನ್ನು ಮುಂದೆ ನಿಂತು ಕೆಲಸ ತೆಗೆದುಕೊಂಡಿರುತ್ತೇನೆ. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಸದಸ್ಯರು, ತಾಲ್ಲೂಕಾ ಪಂಚಾಯತ್ ಅಧ್ಯಕ್ಷರು, ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಸಮಸ್ತ ನಾಗರೀಕರ ಸಮ್ಮುಖದಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭ ಮಾಡಲಾಗಿದೆ ಎಂದು ದೂರುದಾರರು ಮಾಡಿರುವ ದೂರನ್ನು ಮುಕ್ತಾಯ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

14. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಶ್ರೀ. ಅರುಣ್ ಕುಲಕರ್ಣಿ ರವರನ್ನು ಪಿ.ಡಬ್ಲ್ಯೂ-1 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರವರೆಗಿನ

ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement) ಯನ್ನು ದಿನಾಂಕ : 29/11/2021 ರಂದು ಪಡೆದುಕೊಳ್ಳಲಾಗಿರುತ್ತದೆ.

15. ಆ.ಸ.ನೌ ರವರು ಸ್ವತಃ ಡಿ.ಡಬ್ಲ್ಯೂ-1 ರಂತೆ ಸಾಕ್ಷ್ಯ ನುಡಿದಿದ್ದು, ತಮ್ಮ ಪರವಾಗಿ ನಿಶಾನೆ ಡಿ-1 ರಿಂದ 15 ರವರೆಗೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

16. ಮಂಡನಾಧಿಕಾರಿಯವರ ಮತ್ತು ಆ.ಸ.ನೌ ರವರ ಪರ ವಕೀಲರ ವಾದ ಆಲಿಸಿದೆ ಮತ್ತು ಆ.ಸ.ನೌ ರವರ ವಕೀಲರು ಸಲ್ಲಿಸಿರುವ ಲಿಖಿತ ವಾದವನ್ನು ಪರಿಶೀಲಿಸಿದೆ.

17. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1: ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?**

**ಅಂಶ-2: ಆದೇಶವೇನು?**

18. ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

19. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

ಅಂಶ-1) ನಕಾರಾತ್ಮಕವಾಗಿದೆ.

ಅಂಶ-2) ಅಂತಿಮ ಆದೇಶದಂತೆ.

# ಕಾರಣಗಳು

20. **ಅಂಶ-1** : ಈ ಪ್ರಕರಣದಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ಜಯಪ್ರಕಾಶ್ ಕಾಂಬ್ಳೆ ಇವರಿಗೆ ಸಾಕ್ಷ್ಯವನ್ನು ವಿಚಾರಣಾ ನ್ಯಾಯಾಲಯದ ಮುಂದೆ ಮಂಡಿಸಲು ದಿನಾಂಕ: 09/11/2018 ರಂದು ಮೊದಲ ಬಾರಿಗೆ ಅವರಿಗೆ ಸಮನ್ಸ್‌ನ್ನು ಹೊರಡಿಸಿದ್ದು, ನಂತರ ದಿನಾಂಕ: 26/12/2018 ರಂದು ಪುನ: ಸಮನ್ಸ್‌ನ್ನು ಹೊರಡಿಸಿದ್ದು, ನಂತರ ದಿನಾಂಕ : 15/2/2019, 08/04/2019, 27/05/2019, 03/07/2019, 19/08/2019, 14/10/2019 ಮತ್ತು 12/12/2019 ರ ದಿನಾಂಕಗಳಂದು ಅವರಿಗೆ ಜಾಮೀನು ರಹಿತ ವಾರೆಂಟ್‌ಗಳನ್ನು ಹೊರಡಿಸಿದ್ದು, ಆದರೆ ಸದರಿ ದೂರುದಾರರು ತಮ್ಮ ವಿಳಾಸವನ್ನು ದುರುದ್ದೇಶದಿಂದ ತಪ್ಪಾಗಿ ನೀಡಿ ದೂರು ಸಲ್ಲಿಸಿದ್ದು, ಅವರಿಗೆ ಸಮನ್ಸ್ ಮತ್ತು ವಾರೆಂಟ್‌ಗಳನ್ನು ಜಾರಿಗೊಳಿಸಲು ಸಾಕಷ್ಟು ಪ್ರಯತ್ನ ಪಟ್ಟಿದ್ದರೂ ಸಹ ಅವರು ಎಲ್ಲಿ ವಾಸವಾಗಿರುತ್ತಾರೆ ಎಂಬುದು ತಿಳಿದಿರುವುದಿಲ್ಲ ಎಂದು ಸಂಬಂಧಪಟ್ಟ ಪೋಲೀಸರು ವರದಿ ಸಲ್ಲಿಸಿರುತ್ತಾರೆ. ತದನಂತರದಲ್ಲಿ ಸದರಿ ದೂರುದಾರರಿಗೆ ಪ್ರೋಕ್ಲಮೇಷನ್ ಹೊರಡಿಸಿದ್ದು, ಪ್ರೋಕ್ಲಮೇಷನ್ ಜಾರಿಗೊಳಿಸಿ ಅವರ ಹಾಜರಾತಿಗೆ ಕಾಯ್ದಿದ್ದರೂ ಸಹ ಅವರು ವಿಚಾರಣಾ ನ್ಯಾಯಾಲಯಕ್ಕೆ ಹಾಜರಾಗದೇ ಇದ್ದುದರಿಂದ ಅವರ ಸಾಕ್ಷ್ಯವನ್ನು ಮಾಡಿಸಲು ಸಾಧ್ಯವಾಗಿರುವುದಿಲ್ಲ.

21. ನಂತರ ಈ ಪ್ರಕರಣದಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಶ್ರೀ.ಅರುಣ್ ಕುಲಕರ್ಣಿ ರವರನ್ನು ಪಿ.ಡಬ್ಲ್ಯೂ-1 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

22. ಪಿ.ಡಬ್ಲ್ಯೂ-1/ಶ್ರೀ. ಅರುಣ್ ಕುಲಕರ್ಣಿ ರವರು 2013-14 ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಲ್ಲಿ ಜಿಲ್ಲಾ ಅಭಿಯಂತರರಾಗಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿದ್ದೆ. ಡಿ.ಡಿ.ಪಿ.ಐ. ರವರ ನಿರ್ದೇಶನದ ಮೇಲೆ ಭಾಲ್ಕಿ ತಾಲ್ಲೂಕಿನ ಕೋಸಂ ಸರ್ಕಾರಿ ಪ್ರೌಢಶಾಲೆ ಆವರಣಕ್ಕೆ ಸುಮಾರು 7 ವರ್ಷಗಳ ಹಿಂದೆ ಭೇಟಿ ಕೊಟ್ಟು ಅಲ್ಲಿ ಕಟ್ಟಲಾಗಿದ್ದ 5 ಶಾಲಾ ಕೊಠಡಿಗಳ ಕಾಮಗಾರಿಗಳನ್ನು ಪರಿಶೀಲನೆ ಮಾಡಿದ್ದೆ. ಕಾಮಗಾರಿ ಸುಸ್ಥಿತಿಯಲ್ಲಿದ್ದು ಹಾಗೂ ಯಾವುದೇ ಕಳಪೆ ಕಾಮಗಾರಿ ಮೇಲ್ನೋಟಕ್ಕೆ ಕಂಡು ಬಂದಿರಲಿಲ್ಲ. ಆದರೆ ಮೇಲ್ಛಾವಣಿಯಲ್ಲಿ ನೀರು ಸಂಗ್ರಹಣೆ ಆಗುತ್ತಿದ್ದುದರಿಂದ ಡಬ್ಲ್ಯೂಪಿಟಿ (weather proof treatment) ಅಳವಡಿಸಿ ಸರಿಪಡಿಸಬೇಕೆಂದು ಗುತ್ತಿಗೆದಾರರಿಗೆ ಮತ್ತು ಆ.ಸ.ನೌ ರವರಿಗೆ ಸೂಚನೆ ಕೊಟ್ಟಿದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

23. ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ, ತಾನು ಕಾಮಗಾರಿ ಪರಿಶೀಲನೆ ಮಾಡಿದ ಬಗ್ಗೆ ವರದಿಯನ್ನು ಕೊಟ್ಟ 15 ದಿನಗಳೊಳಗಾಗಿ ಡಬ್ಲ್ಯೂಪಿಟಿ (weather proof treatment) ಅಳವಡಿಸಿ, ಮೇಲ್ಛಾವಣಿಯಲ್ಲಿ ನೀರು ನಿಲ್ಲುವುದನ್ನು ತಡೆದಿರುತ್ತಾರೆ ಎಂಬ ಮಾಹಿತಿ ತನಗಿದೆ. ತಾನು ಪರಿಶೀಲನೆ ಮಾಡಿ ಸಲ್ಲಿಸಿದ ವರದಿ ನಕಲನ್ನು ನೋಡಲಾಗಿ ಅದನ್ನು ನಿ.ಪಿ-1 ಎಂದು ಗುರುತಿಸಿರುತ್ತಾರೆ. ತನ್ನ ಪ್ರಕಾರ ಕಾಮಗಾರಿಯು ಡಿಸೈನ್ ಮತ್ತು ಡ್ರಾಯಿಂಗ್ ಪ್ರಕಾರ ಮಾಡಲಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ.

24. ಆ.ಸ.ನೌ ಪರ ವಕೀಲರು ನಡೆಸಿದ ಪಾಟಿ ಸವಾಲಿನಲ್ಲಿ ಪಿ.ಡಬ್ಲ್ಯೂ-1 ರವರು ಆ.ಸ.ನೌ ಮತ್ತು ಕಟ್ಟಡ ಕಾಮಗಾರಿಗೆ ಸಂಬಂಧವಿರುವುದಿಲ್ಲ. ಆದರೆ ಹಣ ಬಿಡುಗಡೆ ಮಾಡುವ ಅಧಿಕಾರ ಮಾತ್ರ ಅವರಿಗೆ ಇದೆ ಎಂದರೆ ಸರಿ. ಎಂ.ಬಿ. ಪುಸ್ತಕದಲ್ಲಿ ತಾವು ಹಣ ಬಿಡುಗಡೆ ಶಿಫಾರಸ್ಸು ಮಾಡಿದಾಗ ಅದನ್ನು ಆ.ಸ.ನೌ ರವರು ಕ್ಷೇತ್ರ ಎಂ.ಎಲ್.ಎ. ರವರಿಗೆ ತೋರಿಸಿ, ಅವರ ಸಹಿ ಪಡೆದು ಹಣ ಬಿಡುಗಡೆ ಮಾಡುತ್ತಾರೆ. ಕಟ್ಟಡ ಕಾಮಗಾರಿ

ಪೂರ್ಣಗೊಂಡ ನಂತರ ಸ್ವಾಧೀನ ಶಾಲಾ ಮುಖ್ಯ ಗುರುಗಳಿಗೆ ಕೊಟ್ಟ ನಂತರ ವಿದ್ಯಾರ್ಥಿಗಳೊಂದಿಗೆ ತರಗತಿ ಪ್ರಾರಂಭಿಸುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

25. ಮುಂದುವರೆದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-1 ರವರು ಕಾಮಗಾರಿಗಳನ್ನು ಪರಿಶೀಲನೆ ಮಾಡಿದ ನಂತರ ದಿನಾಂಕ : 18/06/2013 ರಂದು ಆ.ಸ.ನೌ ಮತ್ತು ಎಸ್.ಡಿ.ಎಂ.ಸಿ ಅಧ್ಯಕ್ಷರಿಗೆ ಸೂಚನೆ ಕೊಟ್ಟ ಬಗ್ಗೆ ತಾನು ಬರೆದು ಕೊಟ್ಟ ಮುಚ್ಚಳಿಕೆ ಪತ್ರ ಈಗ ನೋಡಿದ ದಾಖಲೆಯಾಗಿರುತ್ತದೆ ಎಂದರೆ ಸರಿ. ಈ ದಾಖಲೆಯನ್ನು ನಿ.ಡಿ.1 ಎಂದು ಗುರುತಿಸಿರುತ್ತಾರೆ. ಶಾಲಾ ಕೊಠಡಿಗಳ ಮೇಲ್ಛಾವಣಿ ಮೇಲೆ ನೀರು ಶೇಖರಣೆಯಾಗಿದ್ದು ಗುತ್ತಿಗೆದಾರರ ತಪ್ಪಾಗಿದ್ದು, ಆ.ಸ.ನೌ ರವರಿಗೆ ಇದರಲ್ಲಿ ಯಾವುದೇ ಪಾತ್ರ ಇಲ್ಲ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

26. ಮುಂದುವರೆದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-1 ರವರು ತನ್ನ ಹೊಣೆಗಾರಿಕೆಯಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭ ಆದಾಗಿನಿಂದ ಮುಕ್ತಾಯವಾಗಿರುತ್ತದೆ ಎಂದರೆ ಸರಿ. ಕಾಮಗಾರಿ ಮುಕ್ತಾಯವಾದ ನಂತರ ಡಿ.ಡಿ.ಪಿ.ಐ ರವರ ಮೂಲಕ ಶಾಲಾ ಮುಖ್ಯ ಗುರುಗಳಿಗೆ ಸ್ವಾಧೀನವನ್ನು ಕೊಡಲಾಗಿತ್ತು. ದೂರುದಾರರು ಮಾಡಿರುವ ಆರೋಪ ಆ.ಸ.ನೌ ರವರಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

27. ಸಾಕ್ಷಿ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾವು ಸ್ಥಳಕ್ಕೆ ಭೇಟಿ ನೀಡಿ ಶಾಲಾ ಕೊಠಡಿಗಳ ಕಾಮಗಾರಿಯನ್ನು ಪರಿಶೀಲನೆ ಮಾಡಿದಾಗ ಕಾಮಗಾರಿ ಸುಸ್ಥಿತಿಯಲ್ಲಿದ್ದು, ಯಾವುದೇ ಕಳಪೆ ಕಾಮಗಾರಿ ಮೇಲ್ನೋಟಕ್ಕೆ ಕಂಡುಬಂದಿರುವುದಿಲ್ಲ ಕೇವಲ ಮೇಲ್ಛಾವಣಿಯಲ್ಲಿ ನೀರು ಸಂಗ್ರಹಣೆ ಆಗುತ್ತಿದ್ದರಿಂದ ಡಬ್ಲ್ಯೂಪಿಟಿ ಅಳವಡಿಸಿ

ಸರಿಪಡಿಸಬೇಕೆಂದು ಸೂಚನೆ ನೀಡಿದ್ದೆ, ಅದರಂತೆ 15 ದಿನಗಳೊಳಗಾಗಿ ಡಬ್ಲ್ಯೂಪಿಟಿ ಅಳವಡಿಸಿ ಮೇಲ್ಛಾವಣಿಯಲ್ಲಿ ನೀರು ನಿಲ್ಲುವುದನ್ನು ತಡೆದಿರುವ ಬಗ್ಗೆ ತನಗೆ ಮಾಹಿತಿ ದೊರಕಿತು ಎಂದು ನುಡಿದಿರುತ್ತಾರೆ ಹಾಗೂ ಈ ಸಾಕ್ಷಿದಾರರು ಕೊಟ್ಟ ನಿಶಾನೆ.ಪಿ-1 ವರದಿಯಲ್ಲಿಯೂ ಸಹ ಅದೇ ರೀತಿ ನಮೂದಿಸಿದ್ದು, ಉಳಿದಂತೆ ಎಲ್ಲಾ ಕಾಮಗಾರಿಯು ನೀಲ ನಕ್ಷೆಯಂತೆ ಕೆಲಸ ಮಾಡಲಾಗಿದೆ ಎನ್ನುವುದನ್ನು ಸಹ ನಿ.ಪಿ-1 ವರದಿಯಲ್ಲಿ ನಮೂದಿಸಿರುತ್ತಾರೆ. ಅದೂ ಅಲ್ಲದೇ ಈ ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿಯೂ ಸಹ ಆ.ಸ.ನೌ ರವರಿಗೆ ಕಟ್ಟಡ ಕಾಮಗಾರಿಯ ಸಂಬಂಧವಿರುವುದಿಲ್ಲ. ಆದರೆ ಹಣ ಬಿಡುಗಡೆ ಮಾಡುವ ಅಧಿಕಾರ ಮಾತ್ರ ಅವರಿಗೆ ಇದ್ದು, ಎಂ.ಬಿ ಪುಸ್ತಕದಲ್ಲಿ ತಾವು ಹಣ ಬಿಡುಗಡೆಗೆ ಶಿಫಾರಸ್ಸು ಮಾಡಿದಾಗ ಅದನ್ನು ಆ.ಸ.ನೌ ರವರು ಕ್ಷೇತ್ರ ಎಂ.ಎಲ್.ಎ ರವರಿಗೆ ತೋರಿಸಿ ಅವರ ಸಹಿ ಪಡೆದು ಹಣ ಬಿಡುಗಡೆ ಮಾಡುತ್ತಾರೆ ಎನ್ನುವುದನ್ನು ಒಪ್ಪಿಕೊಂಡಿರುತ್ತಾರೆ. ಕಟ್ಟಡ ಕಾಮಗಾರಿ ಸದರಿ ಸಾಕ್ಷಿದಾರರ ಹೇಳಿಕೆಯಿಂದ ಮತ್ತು ನಿ.ಪಿ-1 ವರದಿಯ ಮೇಲಿಂದ ಆ.ಸ.ನೌ ರವರಿಗೆ ಕಟ್ಟಡ ಕಾಮಗಾರಿಯ ಕೆಲಸದಲ್ಲಿ ಅವರ ಪಾತ್ರ ಇರದೇ ಇರುವುದು ಆದರೆ ಹಣ ಬಿಡುಗಡೆ ಮಾಡುವ ಅಧಿಕಾರ ಮಾತ್ರ ಇದ್ದು, ಎಂ.ಬಿ ಪುಸ್ತಕದಲ್ಲಿ ಸಂಬಂಧಪಟ್ಟ ಅಭಿಯಂತರರು ಬರೆದು ಹಣ ಬಿಡುಗಡೆಗೆ ಶಿಫಾರಸ್ಸು ಮಾಡಿದ ನಂತರದಲ್ಲಿ ಕ್ಷೇತ್ರ ಎಂ.ಎಲ್.ಎ ರವರಿಗೆ ತೋರಿಸಿ ಅದರಂತೆ ಹಣ ಬಿಡುಗಡೆ ಮಾಡುವ ಹೊಣೆಗಾರಿಕೆ ಇರುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಅದೂ ಅಲ್ಲದೇ ಆ.ಸ.ನೌ ರವರು ಕಾಮಗಾರಿ ಮುಕ್ತಾಯವಾದ ನಂತರ ಡಿ.ಡಿ.ಪಿ.ಐ ರವರ ಮೂಲಕ ಶಾಲಾ ಕಟ್ಟಡದ ಸ್ವಾಧೀನವನ್ನು ಕೊಡಲಾಗಿತ್ತು ಎನ್ನುವುದು ಕಂಡುಬರುತ್ತದೆ. ಕಾರಣ ದೂರುದಾರರು ಮಾಡಿರುವ ಆರೋಪಕ್ಕೆ ಆ.ಸ.ನೌ ರವರಿಗೆ ಸಂಬಂಧ ಇರದೇ ಇರುವುದು ಸ್ಪಷ್ಟವಾಗುತ್ತದೆ.

೨೮. ಆ.ಸ.ನೌ ರವರು ಡಿ.ಡಬ್ಲ್ಯೂ-1 ರವರಂತೆ ಸಾಕ್ಷ್ಯ ನುಡಿದಿರುತ್ತಾರೆ. ಡಿ.ಡಬ್ಲ್ಯೂ-1 ರವರು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಆ.ಸ.ನೌ ರವರು ದಿನಾಂಕ : ೦೩/೦೩/೨೦೧೮ ರಂದು ತಮ್ಮ ಪರವಾಗಿ ಲಿಖಿತ ಹೇಳಿಕೆಯಲ್ಲಿ ನಮೂದಿಸಿದ ಅಂಶಗಳನ್ನೇ ಪುನರುಚ್ಛರಿಸಿ, ಅದರಲ್ಲಿ ದೋಷಾರೋಪಣೆಯಲ್ಲಿ ಮಾಡಿದ ಆಪಾದನೆಯ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ ಹಾಗೂ ಈ ಕೆಳಕಂಡಂತೆ ದಾಖಲೆಗಳನ್ನು ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಗುರುತಿಸಿಕೊಂಡಿರುತ್ತಾರೆ.

1. **Ex.D-1** is zerox copy of permission issued by DDPI dated:05/01/2013.
2. **Ex.D-2** is zerox copy of agreement of contract dated:12/06/2013.
3. **Ex.D-3** is zerox copy of undertaking letter dated:18/06/2013.
4. **Ex.D-4** is zerox copy of estimate for construction of class rules.
5. **Ex.D-5** is zerox copy of plan approved by Exeuctive Engineer, Serve Shikshana Abhiyaana, Bengaluru.
6. **Ex.D-6** is zerox copy of pass book.
7. **Ex.D-7** is zerox copy of approved bill and receipt of bill by contractor.
8. **Ex.D-8** is zerox copy of all students and parents list dated:06/07/2013.

9. **Ex.D-9** is zerox copy of development of work dated:02/12/2013 and mode of payments.
10. **Ex.D-10** is zerox copy of directions issued by DDPI to BEO dated:16/08/2016 to get report about constructions.
11. **Ex.D-11** is zerox copy of Report submitted by BEO to DDPI, date: 22/12/2016.
12. **Ex.D-12** is zerox copy of status of constructions along with photos.
13. **Ex.D-13** is zerox copy of Invitation of Inauguration.
14. **Ex.D-14** is zerxo copy of entire report submitted before Hon'ble Lokayukta by the DGO dated:16/01/2014.
15. **Ex.D-15** is zerox copy of M.B.Book.

29. ಮಂಡನಾಧಿಕಾರಿಯವರು ಡಿ.ಡಬ್ಲ್ಯೂ-1 ರವರನ್ನು ವಿಚಾರಣೆಗೊಳಪಡಿಸಿದ ಪಾಟೀ ಸವಾಲಿನಲ್ಲಿ ತಾನು 2012 ರಿಂದ 2015 ರವರೆಗೆ ಕೋಸಮ್ ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯಲ್ಲಿನ ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಸದರಿ ಶಾಲೆಯ 5 ಕೊಠಡಿಗಳನ್ನು ನಿರ್ಮಾಣ ಮಾಡಲು ಸರ್ಕಾರದಿಂದ ರೂ.31,51,000/- ಮಂಜೂರಾಗಿತ್ತು. ಸದರಿ ಕೊಠಡಿಗಳನ್ನು ನಿರ್ಮಾಣ ಮಾಡಲು ತಾನು ಟೆಂಡರ್ ಕರೆದಿರಲಿಲ್ಲ ಎಂದರೆ ಸರಿ ಎಂದು ನುಡಿದಿರುತ್ತಾರೆ.

30. ಸಾಕ್ಷಿಯು ಮುಂದುವರೆದು ಸಾಕ್ಷಿಯು ಸದರಿ ಟೆಂಡರ್ ಕರೆಯುವ ಕೆಲಸ ಎಸ್.ಡಿ.ಎಂ.ಸಿ ಅಧ್ಯಕ್ಷರ ಕೆಲಸ ಎಂದು ನುಡಿದಿರುತ್ತಾರೆ. ಸದರಿ ಎಸ್.ಡಿ.ಎಂ.ಸಿ ಯ ಅಧ್ಯಕ್ಷರು, ಅಂದರೆ ಆ ತಾಲ್ಲೂಕಿನ ಶಾಸಕರು ಅಧ್ಯಕ್ಷರಾಗಿರುತ್ತಾರೆ, ಆದುದರಿಂದ ಸದರಿ ಅಧ್ಯಕ್ಷರು ಟೆಂಡರ್ ಕರೆಯಲು ಹೊಣೆಗಾರರಾಗಿರುತ್ತಾರೆ. ಟೆಂಡರ್ ಕರೆಯಬೇಕಾಗುತ್ತದೆ ಎಂದು ಶಾಸಕರು/ಅಧ್ಯಕ್ಷರನ್ನು ನೀವು ಕೇಳಬೇಕಾಗಿತ್ತು ಎಂಬ ಪ್ರಶ್ನೆಗೆ ಅವರು ಶಾಸಕರಾಗಿರುವುದರಿಂದ ತಾನು ಅವರನ್ನು ಪ್ರಶ್ನಿಸಲು ಆಗಲಿಲ್ಲ ಎನ್ನುತ್ತಾರೆ.

31. ಸಾಕ್ಷಿಯು ಮುಂದುವರೆದು ಸದರಿ ನಿರ್ಮಾಣ ಕಾರ್ಯದ ಹಣದ ಉಸ್ತುವಾರಿ ಸಲುವಾಗಿ ತಾನು ಮತ್ತು ಶಾಸಕರು ಜಂಟಿ ಖಾತೆ ಹೊಂದಿದ್ದೆವು. ಉಪ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ದಿನಾಂಕ: 5/1/2013 ರಂದು ಸರ್ಕಾರಿ ಶಾಲೆಗಳ ಕಟ್ಟಡ ಕಾಮಗಾರಿಯ ಗುಣಮಟ್ಟ ಕಾಪಾಡಿಕೊಂಡ ಹೋಗತಕ್ಕದೆಂದು ಆದೇಶ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮಗೆ ಅನ್ವಯಿಸುವುದಿಲ್ಲ ಸಂಬಂಧಪಟ್ಟ ಎಸ್.ಎಸ್.ಎ ಜೆ.ಇ ಅರುಣ್ ಕುಮಾರ್ ಕುಲಕರ್ಣಿ ರವರಿಗೆ ಅನ್ವಯಿಸುತ್ತದೆ ಎಂದು ನುಡಿದಿರುತ್ತಾರೆ.

32. ಸಾಕ್ಷಿಯು ಮುಂದುವರೆದು ದೂರುದಾರರು ಈ ದೂರು ಕೊಟ್ಟಿರುವುದು ತನಗೆ ಗೊತ್ತಿದೆ. ಆದರೆ ಈ ಹಿಂದೆ ಅವರ ಪರಿಚಯ ತನಗೆ ಇರಲಿಲ್ಲ. ಲೋಕಾಯುಕ್ತರವರು ಡಿ.ಡಿ.ಪಿ.ಐ ರವರಿಗೆ ಪತ್ರ ಬರೆದು ಈ ಬಗ್ಗೆ ವರದಿ ಸಲ್ಲಿಸಲು ಹೇಳಿದಾಗ ಡಿ.ಡಿ.ಪಿ.ಐ ರವರು ಜಿಲ್ಲಾ ಅಭಿಯಂತರರು, ಎಸ್.ಎಸ್.ಎ ರವರಿಗೆ ಪತ್ರ ಬರೆದು ವರದಿ ತರಿಸಿಕೊಂಡರು ಎಂದರೆ ಸಾಕ್ಷಿದಾರರು ತನಗೆ ಗೊತ್ತಿಲ್ಲ ಅನ್ನುತ್ತಾರೆ.

33. ಸಾಕ್ಷಿಯು ಮುಂದುವರೆದು ಅಭಿಯಂತರರು ಕೊಠಡಿಗಳ ಛಾವಣಿ ಮೇಲೆ ನೀರು ನಿಂತಿರುತ್ತದೆ ಹಾಗೂ ಫ್ಲೋರಿಂಗ್‌ಗೆ ಸಣ್ಣ ಸಣ್ಣ ಸ್ಲಾಬ್ ತುಂಡುಗಳನ್ನು ಬಳಸಿ ಫ್ಲೋರಿಂಗ್

ಮಾಡಿದ್ದಾರೆ ಎಂದು ವರದಿ ನೀಡಿದ್ದಾರೆ ಎಂದರೆ ಸಾಕ್ಷಿಯು ಎಸ್.ಎಸ್.ಎ ಇಂಜಿನಿಯರ್ ರವರು ಅದನ್ನು ಸರಿಪಡಿಸಿದರು ಎನ್ನುತ್ತಾರೆ. ಕಳಪೆ ಕಾಮಗಾರಿ ಮಾಡಿದ್ದಾರೆ ಎಂದು ತನಿಖಾಧಿಕಾರಿ ತಮ್ಮ ವರದಿಯಲ್ಲಿ ಹೇಳಿದ್ದಾರೆ ಎಂದರೆ ಸಾಕ್ಷಿದಾರರು ಸರಿಯಲ್ಲ ಎನ್ನುತ್ತಾರೆ. ಇದನ್ನು ಪರಿಶೀಲಿಸದೆ ಚೆಕ್ ನೀಡಿದ್ದೀರಿ, ಎಂಬ ಪ್ರಶ್ನೆಗೆ ಸಾಕ್ಷಿಯು ಜೆ.ಇ ಇವರ ಆದೇಶದ ಮೇರೆಗೆ ಮತ್ತು ಎಂ.ಬಿ ಪುಸ್ತಕದ ಪ್ರಕಾರ ಬಿಲ್ ಪಾಸ್ ಆಗಿದೆ ಎಂದು ಹೇಳುತ್ತಾರೆ. ಈ ಪ್ರಕರಣದಿಂದ ನಾನು ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ..

34. ಆ.ಸ.ನೌ ರವರು ಹಾಜರುಪಡಿಸಿರುವ ದಾಖಲೆಗಳಲ್ಲಿ ನಿಶಾನೆ.ಡಿ-5 ಕಾಮಗಾರಿ ಕಟ್ಟಡದ ನೀಲ ನಕ್ಷೆಯಾಗಿದ್ದು, ನಿಶಾನೆ.ಡಿ-4 ಕಾಮಗಾರಿಯ ಅಂದಾಜು ಪಟ್ಟಿಯಾಗಿರುತ್ತದೆ. ಆ.ಸ.ನೌ ರವರು ನಿಶಾನೆ ಡಿ-8 ರ ದಾಖಲೆಯಲ್ಲಿ ಶಾಲೆಯ ಎಸ್.ಡಿ.ಎಂ.ಸಿ ರಚನೆ ಮಾಡಲು ವಿದ್ಯಾರ್ಥಿಗಳ ಪಾಲಕರ ಸವಿವರದ ವರದಿಯನ್ನು ಸನ್ಮಾನ್ಯ ಭಾಲ್ಕಿ ಕ್ಷೇತ್ರದ ಶಾಸಕರಾದ ಶ್ರೀ. ಈಶ್ವರ ಖಂಡ್ರೆ ರವರಿಗೆ ಪತ್ರ ಬರೆದಿರುವುದು ಮತ್ತು ಅದರೊಂದಿಗೆ ವಿದ್ಯಾರ್ಥಿಗಳ ಪಾಲಕರ ಪಟ್ಟಿ ಕಳುಹಿಸಿರುವುದು ಕಂಡು ಬರುತ್ತದೆ. ಸದರಿ ನಿಶಾನೆ.ಡಿ-8 ದಾಖಲೆಯಿಂದ ಆ.ಸ.ನೌ ರವರು ಎಸ್.ಡಿ.ಎಂ.ಸಿ ರಚನೆ ಮಾಡಲು ಶಾಸಕರಿಗೆ ವಿನಂತಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ನಿಶಾನೆ.ಡಿ-11 ರ ದಾಖಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ, ಭಾಲ್ಕಿ ಇವರು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್ ಇವರಿಗೆ ಶಾಲೆಯ ವೀಕ್ಷಣೆ ಮಾಡಿ ಉತ್ತಮ ಸ್ಥಿತಿಯಲ್ಲಿರುವುದು ಕಂಡುಬಂದಿರುತ್ತದೆ ಎಂದು ವರದಿ ಮಾಡಿರುವುದು ಸ್ಪಷ್ಟವಾಗುತ್ತದೆ.

35. ಈ ವಿಚಾರಣಾ ನ್ಯಾಯಾಲಯದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿ-1 ರವರ ಹೇಳಿಕೆ ಹಾಗೂ ನಿಶಾನೆ.ಪಿ-1 ದಾಖಲೆಯಿಂದ ಮತ್ತು ಆ.ಸ.ನೌ ರವರ ಹೇಳಿಕೆ ಹಾಗೂ ಅವರು

ಹಾಜರುಪಡಿಸಿರುವ ದಾಖಲೆಗಳಿಂದ ಈ ಪ್ರಕರಣದಲ್ಲಿಯ ದೂರುದಾರರು ದುರುದ್ದೇಶ ಪೂರಕವಾಗಿ ತಮ್ಮ ಸುಳ್ಳು ವಿಳಾಸವನ್ನು ಕೊಟ್ಟು ದೂರು ಸಲ್ಲಿಸಿರುವುದು ಕಂಡುಬರುತ್ತದೆ. ಮತ್ತು ಸಾಕ್ಷಿ-1 ರವರ ಹೇಳಿಕೆ ಮೇಲಿಂದ ಕಾಮಗಾರಿಯ ಕೆಲಸದಲ್ಲಿ ಆ.ಸ.ನೌ ರವರ ಪಾತ್ರ ಇಲ್ಲ ಎನ್ನುವುದು ಅವರು ಕೇವಲ ಸಂಬಂಧಪಟ್ಟ ಅಭಿಯಂತರರ ಶಿಫಾರಸ್ಸಿನಂತೆ ಅದನ್ನು ಕ್ಷೇತ್ರ ಶಾಸಕರ ಗಮನಕ್ಕೆ ತಂದು ಅವರೊಂದಿಗೆ ಸೇರಿ ಜಂಟಿಯಾಗಿ ಹಣ ಬಿಡುಗಡೆಗೊಳಿಸುವ ಕರ್ತವ್ಯವಾಗಿರುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಅದೂ ಅಲ್ಲದೇ ಮಾಡಲಾದ ಶಾಲಾ ಕಟ್ಟಡದ ಕಾಮಗಾರಿ, ನಿಶಾನೆ.ಡಿ-11 ಕ್ಷೇತ್ರ ಶಿಕ್ಷಣಾಧಿಕಾರಿಗಳು, ಭಾಲ್ಕಿ ಇವರು ಡಿ.ಡಿ.ಪಿ.ಐ, ಬೀದರ್ ಇವರಿಗೆ ಸಲ್ಲಿಸಿದ ವರದಿಯಲ್ಲಿ ಉತ್ತಮ ಸ್ಥಿತಿಯಲ್ಲಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಕಾರಣ ಆ.ಸ.ನೌ ರವರ ಮೇಲೆ ಹೊರಿಸಲಾದ ಆಪಾದನೆಯನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರವು ವಿಫಲವಾಗಿದೆಯೆಂದು ಅಭಿಪ್ರಾಯಪಟ್ಟು, ಆ.ಸ.ನೌ ರವರು ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i) ರಿಂದ (iii) ರಡಿಯಲ್ಲಿ, ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವುದು ಕಂಡು ಬರುವುದಿಲ್ಲ. ಈ ಎಲ್ಲಾ ಕಾರಣಗಳಿಂದ **ಅಂಶ-1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ**.

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಲಾಗಿದೆ.**

## ವಿಚಾರಣಾ ವರದಿ

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಶಿವಕುಮಾರ್ ಬಿ ಮೇತ್ರೆ, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೋಸಂ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪವನ್ನು ರುಜುವಾತುಪಡಿಸಲು ವಿಫಲವಾಗಿದೆ.

ಆ.ಸ.ನೌ ರವರ ನಿವೃತ್ತಿ ದಿನಾಂಕ: 31/08/2024.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

13/6

**(ಶೋಭಾ ಎಸ್)**
ಅಪರ ನಿಬಂಧಕರು (ವಿಚಾರಣೆಗಳು–13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| File 3 | **Witness examined on behalf of the Disciplinary Authority** |
| --- | --- |
| | **PW-1**: Sri. Arun Kulkarni (Original) |
| | **Witness examined on behalf of the Defence** |
| | **DW-1:** Sri. Shiva Kumar B Methre (Original) |
| **File 4** | **Documents marked on behalf of the Disciplinary Authority** |
| | **Ex. P-1**: Report of I.O (xerox) |
| | **Documents marked on behalf of the DGO** |
| | **Ex.D-1** is zerox copy of permission issued by DDPI dated:05/01/2013 (Xerox). |
| | **Ex.D-2** is zerox copy of agreement of contract dated:12/06/2013 (Xerox). |
| | **Ex.D-3** is zerox copy of undertaking letter dated:18/06/2013 (Xerox). |
| | **Ex.D-4** is zerox copy of estimate for construction of class rules (Xerox). |
| | **Ex.D-5** is zerox copy of plan approved by Exeuctive Engineer, Serve Shikshana Abhiyaana, Bengaluru (Xerox). |
| | **Ex.D-6** is zerox copy of pass book (Xerox). |
| | **Ex.D-7** is zerox copy of approved bill and receipt of bill by contractor (Xerox). |
| | **Ex.D-8** is zerox copy of all students and parents list dated:06/07/2013 (Xerox). |
| | **Ex.D-9** is zerox copy of development of work dated:02/12/2013 and mode of payments |

| | |
|---|---|
| | (Xerox). |
| | **Ex.D-10** is zerox copy of directions issued by DDPI to BEO dated:16/08/2016 to get report about constructions (Xerox). |
| | **Ex.D-11** is zerox copy of Report submitted by BEO to DDPI, date: 22/12/2016 (Xerox). |
| | **Ex.D-12** is zerox copy of status of constructions along with photos (Xerox). |
| | **Ex.D-13** is zerox copy of Invitation of Inauguration (Xerox). |
| | **Ex.D-14** is zerxo copy of entire report submitted before Hon`ble Lokayukta by the DGO dated:16/01/2014 (Xerox). |
| | **Ex.D-15** is zerox copy of M.B. Book (Xerox). |

**Dated this the 15th day of June 2022**

15/6

**(Shobha. S)**
Additional Registrar Enquiries-13
Karnataka Lokayukta
Bangalore.